# ಪ್ರಸ್ತುತ ಕಾಲಘಟ್ಟದಲ್ಲಿ ಕನ್ನಡ ಭಾಷೆಗೆ ಇರುವ ಸವಾಲುಗಳು

ಗೌರಮ್ಮ ಟಿ. ರಾಜು

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ನಿಟ್ಟೆ ಡೀಮ್ಡ್ ಟು ಬಿ ಯೂನಿವರ್ಸಿಟಿ, ಯಲಹಂಕ, ಬೆಂಗಳೂರು.

DOI: https://doi.org/10.5281/zenodo.17255934

## ABSTRACT:

ನಮ್ಮ ಹಿರಿಯರನೇಕರು ಈ ನಾಡುನುಡಿಗಳನ್ನು ಕಟ್ಟಿ ಬೆಳೆಸಿದ್ದಾರೆ. ಈ ಕಟ್ಟುವ ಕೆಲಸವನ್ನು ಇಂದಿನವರು ಮುಂದುವರೆಸಿಕೊಂಡು ಹೋಗಬೇಕಾಗಿದೆ. ಈ ಕೆಲಸ ಸತತವಾಗಿ ನಡೆಯಬೇಕಾಗಿರುವಂಥದ್ದು. ನಮ್ಮ ಭಾಷೆಸಾಹಿತ್ಯಗಳ ಅಭಿವೃದ್ಧಿಗಾಗಿ ಕನ್ನಡ ನಾಡಿನ ಸರ್ವಾಂಗೀಣ ಬೆಳವಣಿಗೆಗಾಗಿ ನಾವೆಲ್ಲರೂ ಸಂಕಲ್ಪ ಬಲದಿಂದ ದುಡಿಯಬೇಕಾಗಿದೆ. ಭಾಷೆ ಬೆಳೆದರೆ ಸಂಸ್ಕೃತಿಯೂ ಬೆಳೆಯುತ್ತದೆ. ಶ್ರೀಮಂತ ಭಾಷೆಯಲ್ಲಿ ಮಾತ್ರವೇ ವಿಚಾರಗಳು ಸ್ಪಂದಿಸಬಲ್ಲವು. ಸಮಾಜದ ಆರೋಗ್ಯ ಪಾಲನೆಯಲ್ಲಿ ಭಾಷೆಯದೂ ಮಹತ್ವದ ಪಾಲಿದೆ. ಕರ್ನಾಟಕದಲ್ಲಿ ಕನ್ನಡವೇ ಮುಖ್ಯ. ನಾವು ಎಲ್ಲಿಯೇ ಇರಲಿ ಕನ್ನಡಿಗರು ನಮ್ಮ ರಾಜ್ಯದ ವಿಮಾನ ನಿಲ್ದಾಣ, ರೈಲ್ವೆ, ಅಂಚೆ ಕಛೇರಿ ಮತ್ತು ಬ್ಯಾಂಕ್ ಇತರ ಕೇಂದ್ರ ಕಛೇರಿಗಳಲ್ಲಿ ಕನ್ನಡ ಭಾಷೆಯನ್ನು ಹೆಚ್ಚಾಗಿ ಬಳಸಬೇಕು. ನಾವು ಮೊದಲು ಕನ್ನಡಿಗರಾಗಬೇಕು. ನಮ್ಮ ವ್ಯವಹಾರ ಕನ್ನಡದಲ್ಲಿರಬೇಕು. ನಮ್ಮ ಕಲಿಕೆ ಮಾತೃಭಾಷೆಯಲ್ಲಿರಬೇಕು.

## KEYWORDS:

ತಂತ್ರಜ್ಞಾನ, ಡಿಜಿಟಲ್, ಜ್ಞಾನವರ್ಧಕ, ವೆಬ್‌ಸೈಟ್.

ಏಳು ಕೋಟಿ ಕನ್ನಡಿಗರ ನಾಲಿಗೆಗಳ ಮೇಲೆ ನಲಿದಾಡುತ್ತಿರುವ ನಮ್ಮ ಸಮೃದ್ಧವಾದ ಕನ್ನಡ ಭಾಷೆ 21ನೇ ಶತಮಾನದಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪರದಾಡುತ್ತಿರುವುದನ್ನು ಕಂಡರೆ ಕರ್ನಾಟಕದಲ್ಲಿ ಹುಟ್ಟಿ ಕನ್ನಡಿಗರಾದ ನಮಗೆ ಕನ್ನಡ ಉಳಿಸಲು ಎದುರಾಗಿರುವ ಸವಾಲು. ಯಾವುದೇ ಒಂದು ಭಾಷೆ ಸಾವಿರಾರು ವರ್ಷಗಳ ಕಾಲ ಜೀವಂತವಾಗಿ ಉಳಿಯಬೇಕಾದರೆ, ಅದು ಸಮಾಜದ ಎಲ್ಲಾ ವರ್ಗದ ಜನರ ದಿನನಿತ್ಯದ ಸಂವಹನದ ಮಾಧ್ಯಮವಾಗಬೇಕು. ಇಲ್ಲದಿದ್ದರೆ ಕಾಲದ ಸುಳಿಗೆ ಸಿಕ್ಕಿ ಅವನತಿಯ ಅಂಚಿಗೆ ಸರಿಯುತ್ತದೆ.

ಇಂಗ್ಲಿಷ್ ಭಾಷೆಗೆ ಅದರದ್ದೇ ಆದ ಲಿಪಿಯಿಲ್ಲ. ಅದನ್ನು ರೋಮನ್ ಲಿಪಿಯಲ್ಲಿ ಬರೆಯಲಾಗುತ್ತದೆ. ಹಿಂದಿ ಭಾಷೆಗೂ ಅದರದ್ದೇ ಆದ ಲಿಪಿಯಿಲ್ಲ. ಅದನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗುತ್ತದೆ. ತಮಿಳು ಭಾಷೆಗೆ ಲಿಪಿ

ಇದ್ದರೂ ಪ್ರಾಯೋಗಿಕವಾಗಿ ಸರಿಯಿಲ್ಲ. ಏಕೆಂದರೆ ಹೆಚ್ಚಿನ ಉಚ್ಚಾರಗಳಿಗೆ ಒಂದೇ ಲಿಪಿಯನ್ನು ಬಳಸಲಾಗುತ್ತದೆ. ಆದರೆ ಕನ್ನಡ ಭಾಷೆಗೆ ಅದರದ್ದೇ ಆದ ಲಿಪಿಯೂ ಇದ್ದು ಅದನ್ನು ಓದಲೂಬಹುದು ಹಾಗೂ ಬರೆಯಲುಬಹುದಾಗಿದೆ.

**ಕನ್ನಡ ಭಾಷೆಯ ಹಿನ್ನೆಲೆ:**

ದಕ್ಷಿಣ ಭಾರತದ ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಪ್ರಾಮುಖ್ಯವುಳ್ಳ ಭಾಷೆ ಹಾಗೂ ಭಾರತದ ಪುರಾತನವಾದ ಭಾಷೆಗಳಲ್ಲಿ ಒಂದಾಗಿರುವ ಕನ್ನಡ ಭಾಷೆಯನ್ನು ಇದರ ವಿವಿಧ ರೂಪಗಳಲ್ಲಿ ಸುಮಾರು 60 ದಶಲಕ್ಷ ಜನರು ಆಡುನುಡಿಯಾಗಿ ಬಳಸುತ್ತಿದ್ದಾರೆ. ಕನ್ನಡ ಕರ್ನಾಟಕ ರಾಜ್ಯದ ಆಡಳಿತ ಭಾಷೆ. ಜಗತ್ತಿನಲ್ಲಿ ಹೆಚ್ಚು ಮಂದಿ ಮಾತನಾಡುವ ಭಾಷೆಯೆಂಬ ನೆಲೆಯಲ್ಲಿ ಇಪ್ಪತ್ತೊಂಬತ್ತನೆಯ ಸ್ಥಾನ ಕನ್ನಡಕ್ಕೆ ಇದೆ. ಬ್ರಾಹ್ಮಿ ಲಿಪಿಯಿಂದ ರೂಪಗೊಂಡ ಕನ್ನಡ ಲಿಪಿಯನ್ನು ಉಪಯೋಗಿಸಿ ಕನ್ನಡ ಭಾಷೆಯನ್ನು ಬರೆಯಲಾಗುತ್ತದೆ. ಕನ್ನಡ ಬರಹಗಳಿಗೆ ಸಾವಿರದ ಐದುನೂರು ವರ್ಷಗಳ ಚರಿತ್ರೆಯಿದೆ. ಕ್ರಿ.ಶ. 6ನೇ ಶತಮಾನದ ಪಶ್ಚಿಮಗಂಗ ಸಾಮ್ರಾಜ್ಯದ ಕಾಲದಲ್ಲಿ ಮತ್ತು 9ನೇ ಶತಮಾನದ ರಾಷ್ಟ್ರಕೂಟ ಸಾಮ್ರಾಜ್ಯದ ಕಾಲದಲ್ಲಿ ಹಳೆಗನ್ನಡ ಸಾಹಿತ್ಯ ಹೆಚ್ಚಿನ ರಾಜಾಶ್ರಯ ಪಡೆಯಿತು. ಅದಲ್ಲದೆ ಕನ್ನಡ ಭಾಷೆಗೆ ಸಾವಿರಾರು ವರ್ಷಗಳ ಸಾಹಿತ್ಯ ಪರಂಪರೆ ಇದೆ. ವಿನೋಬಾ ಭಾವೆಯವರು ಕನ್ನಡ ಭಾಷೆಯ ಲಿಪಿಯನ್ನು "ವಿಶ್ವಲಿಪಿಗಳ ರಾಣಿ" ಎಂದು ಕರೆದಿದ್ದಾರೆ.

ದೇವಭಾಷೆ ಎಂದು ಕರೆಸಿಕೊಂಡಿದ್ದ ಸಂಸ್ಕೃತ ಭಾಷೆಯ ಅಕ್ಷರ ಕಲಿತ ಮೇಲ್ವರ್ಗದ ಸಮುದಾಯಗಳಿಗೆ ಮಾತ್ರ ಸೀಮಿತವಾಗಿತ್ತು. ಇದರಿಂದ, ಸಂಸ್ಕೃತ ಭಾಷೆಯ ಜೊತೆಗೆ ಲ್ಯಾಟಿನ್, ಪಾರ್ಸಿ, ಪಾಲಿ, ಪ್ರಾಕೃತ, ಮುಂತಾದ ಭಾಷೆಗಳು ಈಗ ಅವನತಿಯ ಅಂಚಿಗೆ ಸರಿದು, ಮೃತ್ಯು ಭಾಷೆಗಳ ಸಾಲಿಗೆ ಸೇರಿವೆ.

ಕನ್ನಡ ಸಾಹಿತ್ಯ ಪಂಪನ ಕಾಲಘಟ್ಟದಲ್ಲಿ ಕನ್ನಡ ಭಾಷೆಯು ಸಂಸ್ಕೃತ ಭಾಷೆಯ ಪ್ರಭಾವಕ್ಕೆ ದಟ್ಟವಾಗಿ ಒಳಪಟ್ಟಿತ್ತು. ಅನಂತರ ಕನ್ನಡ ಭಾಷೆಯು ಮಾರ್ಗದಿಂದ ಬಿಡಿಸಿಕೊಂಡು ದೇಸಿಯ ಕಡೆಗೆ ಸಂಕ್ರಮಣಗೊಳ್ಳಲು ವಚನ ಸಾಹಿತ್ಯವು ಕಾರಣವಾಯಿತು. ಈ 12ನೇ ಶತಮಾನದ ವಚನ ಸಾಹಿತ್ಯವನ್ನು ಕುರಿತು ಶಿ.ಶಿ. ಬಸವನಾಳರು "ದೇವವಾಣಿಯನ್ನು ಜನವಾಣಿಯನ್ನಾಗಿಸಲು ಸಾಧ್ಯವಾಗದಿದ್ದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೆ ಏರಿಸಿದವರು ವಚನಕಾರರು" ಎಂದು ಅಭಿಪ್ರಾಯ ಪಡುತ್ತಾರೆ. ಈ ಮಾತಿನಿಂದ ನಮಗೆ ತಿಳಿಯುವುದೇನಂದರೆ, ಕೇವಲ ಯಾವುದೋ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿದ್ದ ಕನ್ನಡ ಭಾಷೆ ಮತ್ತು ಸಾಹಿತ್ಯವು ಸಮಾಜದ ವಿವಿಧ ಸಣ್ಣ ಸಣ್ಣ ಸಮುದಾಯಗಳಿಂದ ಬಂದಂತಹ ಅನೇಕ ಶರಣರು, ಸಮಾಜದ ಕಟ್ಟಕಡೆಯ ಪ್ರತಿಯೊಬ್ಬ

ಜನಸಾಮಾನ್ಯನಿಗೂ ಸಹ ಅರ್ಥವಾಗುವಂತೆ ಸರಳ ಭಾಷೆಯಲ್ಲಿ ತಮ್ಮ ಜೀವನಾನುಭವಗಳನ್ನು ವಚನಗಳ ಮೂಲಕ ಕಟ್ಟಿಕೊಟ್ಟರು. ಮತ್ತೊಂದೆಡೆ, ಕನ್ನಡ ಲಿಪಿಯು ಕಾಲದಿಂದ ಕಾಲಕ್ಕೆ ತನ್ನ ರೂಪವೂ ಸಹ ಬದಲಾವಣೆಗೊಳಪಡುತ್ತಲೇ ಬಂದಿತು.

ಇಂತಹ ನಮ್ಮ ಕನ್ನಡ ಭಾಷೆಯನ್ನು ಹಿಂದಿನಿಂದಲೂ ಸಾಕಷ್ಟು ಕವಿಗಳು, ಶರಣರು, ಸಂತರು, ಕೀರ್ತನಕಾರರು, ಅನೇಕ ಕನ್ನಡ ಅರಸು ಮನೆತನಗಳು, ಸಂಘಸಂಸ್ಥೆಗಳು, ಪೋಷಿಸುತ್ತಾ ಬಂದಿವೆ. ಹಾಗಾಗಿ, ಕನ್ನಡ ಭಾಷೆ ಮತ್ತು ಸಾಹಿತ್ಯವು ಇನ್ನಷ್ಟು, ಮತ್ತಷ್ಟು ಸಮೃದ್ಧಗೊಳ್ಳುತ್ತಾ ಹೆಮ್ಮರವಾಗಿ ಇಂದು ಬೆಳೆದು ನಿಂತಿದೆ. ಆದಕಾರಣ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದೆ. 8 ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ರಾಜಕೀಯ ದ್ವೇಷ, ಭ್ರಷ್ಟಾಚಾರ, ಕೋಮು ಕೊಲೆ, ಜಾತಿ ತಾರತಮ್ಯ, ಮಹಿಳೆಯರ ಅತ್ಯಾಚಾರದಂತಹ ನಕಾರಾತ್ಮಕ ಸುದ್ದಿಗಳ ಹೊಡೆತಗಳಿಂದ ಕಂಗಾಲಾಗಿದ್ದ ಕನ್ನಡಿಗರಿಗೆ ನಾಡಿನ ಇಬ್ಬರು ಮಹಿಳೆಯರು ಬೂಕರ್ ಪ್ರಶಸ್ತಿಯ ಮೂಲಕ ಇದ್ದಕ್ಕಿದ್ದಂತೆ ಸಂಭ್ರಮಿಸುವಂತೆ ಮಾಡಿದರು. ಜನ ಇಬ್ಬರೂ ಲೇಖಕರನ್ನು ತಮ್ಮ ಊರಿಗಳಿಗೆ ಕರೆದು ಸಮ್ಮಾನಿಸುತ್ತಿದ್ದಾರೆ. ಕರ್ನಾಟಕ ಸರ್ಕಾರವೂ ಅಧಿಕೃತವಾಗಿ ಈ ಲೇಖಕಿಯರನ್ನು ಸನ್ಮಾನಿಸಿದೆ. ಓದುಗರು ಬಾನು ಅವರ ಬರಹವನ್ನು ಹುಡುಕಿ ಓದುತ್ತಿದ್ದಾರೆ. ದೀಪಾರವರ ಅನುವಾದವನ್ನು ಇಟ್ಟುಕೊಂಡು ಅನುವಾದ ಮೀಮಾಂಸೆಯ ಚರ್ಚೆ ನಡೆಯುತ್ತದೆ. ಇದೊಂದು ಸಾಹಿತ್ಯಕವಾಗಿ ಸಂಚಲನ ಮೂಡಿಸಿದ ವಿದ್ಯಮಾನವಾಗಿದೆ.

ಭಾರತೀಯ ಮೀಮಾಂಸಕನಾದ ದಂಡಿಯು "ಮಾತೆಂಬ ಜ್ಯೋತಿ ಬೆಳಗದಿದ್ದರೆ ಲೋಕವೆಲ್ಲಾ ಕತ್ತಲೆಯಿಂದ ತುಂಬಿರುತ್ತಿತ್ತು. ಅಂಧಕಾರದಲ್ಲಿ ತೊಳಲಾಡುತ್ತಿತ್ತು" ಎಂದು ಹೇಳುತ್ತಾರೆ. ಈ ಮೇಲಿನ ಅವರ ಮಾತುಗಳಿಂದ ಭಾಷೆಯ ಮಹತ್ವದ ಅರಿವು ನಮಗಾಗುತ್ತದೆ. ಮಾನವ ಮೂಲತಃ ಒಬ್ಬ ಸಂಘ ಜೀವಿ. ಅನಾದಿಕಾಲದಿಂದಲೂ ಇತರ ಜನರೊಂದಿಗೆ ಕೂಡಿ ಜೀವಿಸುತ್ತಾ ಬಂದಿದ್ದಾನೆ. ಕಾಡು ಮೇಡುಗಳಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆಮಾರಿ ಜೀವನ ನಡೆಸುತ್ತಿದ್ದ ಆದಿಮಾನವನು, ತದನಂತರ ಒಂದೆಡೆ ನೆಲೆ ನಿಂತು ತನ್ನದೇ ಆದ ವಿಶಿಷ್ಟ ಸಂಸ್ಕೃತಿ, ಜೀವನಕ್ರಮವನ್ನು ರೂಪಿಸಿಕೊಂಡನು.

ಇಂತಹ ಮಾನವನ ದಿನನಿತ್ಯದ ಕಾರ್ಯಗಳೆಲ್ಲವೂ ಭಾಷೆಯ ಸಂವಹನದ ಮೂಲಕವೇ ಪ್ರಾರಂಭವಾಗುತ್ತದೆ. ಮುಗಿಯುವುದೂ ಅದರಿಂದಲೇ. ಮನುಷ್ಯನು ಜಗತ್ತಿನ ಉಳಿದ ಎಲ್ಲಾ ಜೀವರಾಶಿಗಳಿಗಿಂತ, ವಿಭಿನ್ನ ಮತ್ತು ವಿಶಿಷ್ಟ. ಕಾರಣ ಆತನ ಅಗಾಧವಾದ ಬೌದ್ಧಿಕ ಶಕ್ತಿ. ಈ ಬುದ್ಧಿಶಕ್ತಿಯಿಂದಲೇ ಮನುಷ್ಯ ಭಾಷೆಯನ್ನು

ನಿರಂತರ ಪ್ರಯತ್ನ ಮತ್ತು ಕಲಿಕೆಯಿಂದ ಸಿದ್ಧಿಸಿಕೊಂಡಿದ್ದಾನೆಯೇ ಹೊರತು ಭಾಷೆ ಎಂಬುದೊಂದು ದೈವದತ್ತವಾದುದಲ್ಲ ಎಂಬುದು ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಭಾಷೆಯ ಉಗಮದ ಕುರಿತು ಈಗಾಗಲೇ ಸಾಕಷ್ಟು ಭಾಷಾ ವಿಜ್ಞಾನಿಗಳು ಸಂಶೋಧನೆ ಮಾಡಿದ್ದಾರೆ, ಈಗಲೂ ಮಾಡುತ್ತಲೇ ಇದ್ದಾರೆ.

ಜಗತ್ತಿನ ವಿವಿಧ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ, ಪರಿಸರಗಳಲ್ಲಿ ಸಾವಿರಾರು ಭಾಷೆಗಳು ಪ್ರಸ್ತುತ ಬಳಕೆಯಲ್ಲಿವೆ. ಹಾಗೆಯೇ ನಮ್ಮ ಭಾರತದಲ್ಲಿಯೂ ಸಹ ಸಾವಿರಾರು ವರ್ಷಗಳ ಇತಿಹಾಸ, ಪರಂಪರೆ ಇರುವ ನೂರಾರು ಭಾಷೆಗಳು ಅಸ್ತಿತ್ವದಲ್ಲಿವೆ. ಅಂತಹ ಪ್ರಮುಖ ಭಾಷೆಗಳಲ್ಲಿ ಕನ್ನಡ ಭಾಷೆಯೂ ಸಹ ಒಂದಾಗಿದೆ. ಕನ್ನಡವು ದ್ರಾವಿಡ ಭಾಷೆಯ ಮೂಲದಿಂದ ಕವಲೊಡೆದು ತನ್ನದೇ ಆದ ಪದಸಂಪತ್ತನ್ನು ರೂಪಿಸಿಕೊಂಡು, ಇತರ ಭಾಷೆಗಳಿಂದಲೂ ಹಲವಾರು ಪದಗಳನ್ನು ಸ್ವೀಕರಿಸಿ ಗರ್ಭೀಕರಿಸಿಕೊಂಡು ನಿಂತಿರುವ ಸ್ವತಂತ್ರ ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ಒಂದಾಗಿದೆ. ಈ ಕುರಿತು ಕ್ರಿಸ್ತ ಪೂರ್ವದಲ್ಲಿಯೇ ಹಲವಾರು ಕೃತಿಗಳಲ್ಲಿ, ಶಾಸನಗಳಲ್ಲಿ, ತಮಿಳು, ಸಂಸ್ಕೃತ ಗ್ರಂಥಗಳಲ್ಲಿ ಪ್ರಾಚೀನತೆಯ ಉಲ್ಲೇಖಗಳು ದೊರೆಯುತ್ತವೆ.

ಕನ್ನಡದಲ್ಲಿ ಉಪಲಬ್ಧ ಕೃತಿಯಾಗಿರುವ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ಕನ್ನಡ ನಾಡಿನ ಭೌಗೋಳಿಕ ವಿಸ್ತೀರ್ಣದ ಕುರಿತು ''ಕಾವೇರಿಯಿಂ ದಮಾ ಗೋದಾವರಿ ವರಮಿರ್ದ ನಾಡಾದಾ ಕನ್ನಡದೊಳ್'' ಎಂಬ ಸಾಲು ಉಲ್ಲೇಖಿತವಾಗಿದೆ. ಅಂದರೆ ಈಗಿನ ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರದ ಹಲವಾರು ಪ್ರದೇಶಗಳಲ್ಲಿ ಕನ್ನಡ ಭಾಷೆಯು ಬಳಕೆಯಲ್ಲಿತ್ತು ಎಂಬುದು ಇದರಿಂದ ನಮಗೆ ತಿಳಿಯುತ್ತದೆ.

ನಮ್ಮ ನೆಲಮೂಲ ಸಂಸ್ಕೃತಿ, ಭಾಷೆ, ಪರಂಪರೆಯಿಂದ ನಾವೆಲ್ಲಾ ದೂರವಾಗಿ, ಪಾಶ್ಚಾತ್ಯರ ಸಂಸ್ಕೃತಿಯ ಅನುಕರಣೆಗಳಾಗಿದ್ದೇವೆ. ನಮ್ಮ ಭಾಷೆಯು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ನಮ್ಮ ಸಂಸ್ಕೃತಿ, ಪರಂಪರೆಯನ್ನು ಕೊಂಡೊಯ್ಯುವ ಸೇತುವೆಯಾಗಿ ಭಾಷೆ ಕೆಲಸ ಮಾಡುತ್ತದೆ. ಯಾವುದೇ ಒಂದು ಸಂಸ್ಕೃತಿಯನ್ನು ಅವರ ಮಾತೃಭಾಷೆಯಲ್ಲಿ ಅಭಿವ್ಯಕ್ತಿಪಡಿಸಿದಷ್ಟು, ಇತರ ಅನ್ಯ ಭಾಷೆಗಳಲ್ಲಿ ಸಾಧ್ಯವಾಗುವುದಿಲ್ಲ. ಇಂದು ಜಪಾನ್, ಚೀನಾ, ರಷ್ಯಾ, ಜರ್ಮನಿ, ದಕ್ಷಿಣ ಕೊರಿಯಾದಂತಹ ಮುಂದುವರಿದ ರಾಷ್ಟ್ರಗಳು ತಮ್ಮ ತಮ್ಮ ಮಾತೃಭಾಷೆಗಳಲ್ಲಿಯೇ ಶಿಕ್ಷಣವನ್ನು ನೀಡಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ವಿಜ್ಞಾನತಂತ್ರಜ್ಞಾನ, ಆಧುನಿಕತೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಜಗತ್ತಿನ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಸೆಡ್ಡು ಹೊಡೆಯುತ್ತಿವೆ.

ಕನ್ನಡ ಭಾಷೆಗೆ ಇಷ್ಟೆಲ್ಲಾ ಮೂಲ ದಾಖಲೆಗಳಿದ್ದರೂ ಬೇರೆ ಭಾಷಿಕರು ನಮ್ಮ

ನೆಲ, ಜಲ, ಭಾಷೆಯ ಬಗ್ಗೆ ಕನ್ನಡಿಗರಿಗೆ ಹಿಯಾಳಿಸುತ್ತಲೇ ಬರುತ್ತಿದ್ದಾರೆ. ಇತ್ತೀಚಿಗಷ್ಟೇ ತಮಿಳ್ ನಟ ಕಮಲ್ ಹಾಸನ್ ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದ್ದು ಎಂದು ಹೇಳಿಕೆ ನೀಡಿ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ. ಇನ್ನೊಂದೆಡೆ ಆನೇಕಲ್ ಬಳಿಯ ರಾಷ್ಟ್ರೀಯ ಬ್ಯಾಂಕ್ ಮ್ಯಾನೇಜರ್ ಕನ್ನಡದಲ್ಲಿ ಮಾತನಾಡುವುದಿಲ್ಲ ಎಂಬ ವಿವಾದ ದೊಡ್ಡ ಮಟ್ಟಕ್ಕೇರಿದ ಮೇಲೆ ಕ್ಷಮೆ ಕೇಳಿದ ಘಟನೆ ನಡೆದಿದೆ. ವಾಯು ಪಡೆಯ ಸಿಬ್ಬಂದಿ ಡೆಲಿವರಿ ಹುಡುಗನ ಮೇಲೆ ಹಲ್ಲೆ ನಡೆಸಿ ಅವನು ಕನ್ನಡ ಮಾತನಾಡಲಿಲ್ಲ ಎಂಬುದಕ್ಕೆ ತನ್ನ ಮೇಲಾದ ಹಲ್ಲೆ ಎಂದು ಬಿಂಬಿಸಿದ್ದ. ಇದನ್ನೇ ದೆಹಲಿಯ ಇಂಗ್ಲಿಷ್ ಸುದ್ದಿ ವಾಹಿನಿಯೊಂದು ಕನ್ನಡಿಗರು ಭಾಷಾಂಧರು ಎನ್ನುವ ಹಣೆಪಟ್ಟಿ ಕಟ್ಟಿದೆ.

ಈ ಘಟನೆಗಳೆಲ್ಲದರ ಹಿನ್ನೆಲೆಯಲ್ಲಿ ಕನ್ನಡಿಗರು ತಮ್ಮ ನುಡಿಗಾಗಿ ಸಾಮಾಜಿಕ ಜಾಲತಾಣಗಳ ಒಳಗೂ, ಹೊರಗೂ ಅಳುಕಿಲ್ಲದೆ ದನಿ ಎತ್ತುತ್ತಿದ್ದಾರೆ. ಅದು ಕನ್ನಡದ ಒಂದು ಶಕ್ತಿ ಅನ್ನುವ ವಾದ ಒಂದು ಕಡೆಯಾದರೆ, ಇಂತಹ ಘಟನೆಗಳು ಭಾಷಾ ಸಂಘರ್ಷಕ್ಕೂ ದಾರಿ ಮಾಡಿಕೊಡುತ್ತವೆ ಅನ್ನುವ ವಾದ ಇನ್ನೊಂದೆಡೆ ಕೇಳಿಬರುತ್ತಿದೆ. ಹೈದರಾಬಾದಿನ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಸೇನಾನಿ ಎಂದು ಕರೆಯಲ್ಪಡುವ ಎ. ಆರ್. ಕೃಷ್ಣಶಾಸ್ತ್ರಿಗಳು "ಪ್ರಪಂಚದ ಭೂಪಟದಲ್ಲಿ ಕನ್ನಡ ಮಾತನಾಡುತ್ತಿರುವ ಕರ್ನಾಟಕವು ಅಂಗೈ ಅಗಲದಷ್ಟಿದೆ. ಅದನ್ನು ಉಳಿಸಿಕೊಳ್ಳದಿದ್ದರೆ, ಜಗತ್ತಿನ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ" ಎಂಬ ಮಾತನ್ನು ಹೇಳುತ್ತಾರೆ. ಹಾಗೆಯೇ, ಬಿ.ಎಂ.ಶ್ರೀ ಅವರು "ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ". ಎಂದು ಆಗಲೇ ನಮಗೆಲ್ಲಾ ಎಚ್ಚರಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗರು ನಮ್ಮ ಭಾಷೆಯ ಅಸ್ತಿತ್ವದ ಉಳಿವಿಗಾಗಿ ಈಗಲಾದರೂ ಜಾಗೃತಗೊಳ್ಳಬೇಕಿದೆ.

ಯಾವುದೇ ಪಕ್ಷದ ಸರ್ಕಾರ ಬಂದರೂ ಸಹ ಕನ್ನಡದ ಅಸ್ಮಿತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕನ್ನಡದ ಅಸ್ತಿತ್ವಕ್ಕೆ ಧಕ್ಕೆಯಾಗದ ರೀತಿಯಲ್ಲಿ ಕನ್ನಡ ಪರವಾದ ನೀತಿನಿರ್ಧಾರಗಳನ್ನು ರೂಪಿಸಬೇಕು.

ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಗೆ ಎದುರಾಗಿರುವ ಸವಾಲುಗಳು ಬಹುಮುಖ್ಯವಾಗಿವೆ. ಇವು ಭಾಷೆಯ ಉಳಿವಿಗೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ಒಳಗೊಂಡಿದೆ.

1. **ಆಂಗ್ಲ ಭಾಷೆಯ ಪ್ರಭಾವ:** ಶಿಕ್ಷಣ, ಉದ್ಯೋಗ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಆಂಗ್ಲ ಭಾಷೆಯ ಪ್ರಭಾವ ಹೆಚ್ಚಾಗಿರುವ ಕಾರಣದಿಂದ ಕನ್ನಡ ಬಳಕೆ ಕಡಿಮೆಯಾಗುತ್ತಿದೆ. ಪೋಷಕರು ತಮ್ಮ ಮಕ್ಕಳಿಗೆ ಆಂಗ್ಲ ಮಾಧ್ಯಮದಲ್ಲೇ ಶಿಕ್ಷಣ ನೀಡಲು ಹೆಚ್ಚು

ಆದ್ಯತೆ ನೀಡುತ್ತಿದ್ದಾರೆ. ಇದರಿಂದ ಕನ್ನಡ ಮೂಲಭಾಷೆಯಾಗಿ ಉಳಿಯುವಲ್ಲಿ ಹಿನ್ನಡೆ ಕಾಣಿಸುತ್ತಿದೆ.

2. **ತಂತ್ರಜ್ಞಾನ ಮತ್ತು ಡಿಜಿಟಲ್ ಜಗತ್ತಿನಲ್ಲಿ ಕನ್ನಡ ಬಳಕೆಯ ಕೊರತೆ:** ಇಂಟರ್ನೆಟ್‌ಗಳಲ್ಲಿ ಬಹುತೇಕ ವಿಷಯಗಳು ಆಂಗ್ಲದಲ್ಲಿ ಲಭ್ಯವಿದೆ. ಕನ್ನಡದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವಿಷಯಗಳು ಲಭ್ಯವಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಡ ಲಿಪಿಯ ಬದಲಿಗೆ ಇಂಗ್ಲಿಷ್ ಲಿಪಿಯಲ್ಲಿ ಕನ್ನಡ ಬರೆಯುವುದು ಹೆಚ್ಚಾಗಿದೆ.
3. **ನಗರೀಕರಣ ಮತ್ತು ಆಂತರಿಕ ವಲಸೆ:** ನಗರಗಳಿಗೆ ವಲಸೆ ಬರುವ ಬೇರೆ ಬೇರೆ ರಾಜ್ಯದ ಜನರು ತಮ್ಮ ತಮ್ಮ ಮಾತೃ ಭಾಷೆಯಲ್ಲಿ ಮಾತನಾಡುತ್ತಿರುವುದರಿಂದ ಕನ್ನಡ ಬಳಕೆ ಕುಂಠಿತವಾಗುತ್ತಿದೆ. ಬಹು ಭಾಷಾ ಪರಿಸರದಲ್ಲಿ ಕನ್ನಡದ ಪ್ರಾಬಲ್ಯ ಕಡಿಮೆಯಾಗುತ್ತಿದೆ. ಹೊಟ್ಟೆಪಾಡಿಗಾಗಿ ಬೇರೆ ರಾಜ್ಯದಿಂದ ಬರುವ ವಲಸಿಗರು ಇಲ್ಲೇ ತಮ್ಮ ಜೀವನ ಕಟ್ಟಿಕೊಂಡಿರುತ್ತಾರೆ. ಆದರೆ ಕನ್ನಡ ಮಾತ್ರ ಕಲಿಯುವುದಿಲ್ಲ.
4. **ಶಾಲಾ ಪಠ್ಯಕ್ರಮದಲ್ಲಿ ಕನ್ನಡದ ಸ್ಥಾನ:** ಹಲವಾರು ಖಾಸಗಿ ಶಾಲೆಗಳಲ್ಲಿ ಕನ್ನಡಕ್ಕೆ ಬೇಕಾದಷ್ಟು ಪ್ರಾಮುಖ್ಯತೆ ನೀಡಲಾಗುತ್ತಿಲ್ಲ. ಕೆಲವೆಡೆ ಕನ್ನಡ ಕಲಿಕೆ ಕಡ್ಡಾಯವಲ್ಲದಂತೆ ಮಾಡಲಾಗಿದೆ. ಇದು ಭಾಷಾ ಅರಿವನ್ನು ಕುಗ್ಗಿಸುತ್ತದೆ.
5. **ಯುವಜನತೆಯಲ್ಲಿ ಭಾಷಾ ಅಭಿಮಾನದ ಕೊರತೆ:** ಹೊಸ ತಲೆಮಾರಿಗೆ ತಮ್ಮ ಭಾಷೆಯ ಬಗ್ಗೆ ಅಭಿಮಾನ ಕಡಿಮೆಯಾಗಿದೆ. ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಕನ್ನಡದ ಬಳಕೆ ಕಡಿಮೆಯಾಗಿದೆ.
6. **ಸಾಹಿತ್ಯ ಮತ್ತು ಸಂಸ್ಕೃತಿಯ ಬಳಕೆ ಕುಗ್ಗುತ್ತಿರುವುದು:** ಕನ್ನಡ ಸಾಹಿತ್ಯ, ಓದು ಹಾಗೂ ತಿಳುವಳಿಕೆಯ ಪ್ರಮಾಣ ಕುಗ್ಗುತ್ತಿದೆ. ಜನಪ್ರಿಯ ಮಾಧ್ಯಮಗಳಲ್ಲಿ ಕನ್ನಡ ಸಾಂಸ್ಕೃತಿಕ ವೈವಿಧ್ಯತೆಯ ಪ್ರದರ್ಶನ ಕಡಿಮೆಯಾಗಿದೆ.

**ಪರಿಹಾರ:**

1. ಶಾಲಾ ಮಟ್ಟದಿಂದಲೇ ಕನ್ನಡ ಭಾಷೆಯ ಪ್ರಾಶಸ್ತ್ಯವನ್ನು ಹೆಚ್ಚಿಸುವುದು.
2. ಡಿಜಿಟಲ್ ಮಾಧ್ಯಮದಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹಿಸುವುದು.
3. ಯುವ ಜನತೆಯಲ್ಲಿ ಭಾಷಾಭಿಮಾನ ಬೆಳೆಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸುವುದು.
4. ಕನ್ನಡ ಭಾಷೆ ಮತ್ತು ಸಾಹಿತ್ಯದ ಕುರಿತು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಜ್ಞಾನವರ್ಧಕ ಆಪ್‌ಗಳು, ವೆಬ್‌ಸೈಟ್‌ಗಳನ್ನು ಸೃಷ್ಟಿಸುವುದು.
5. ಕನ್ನಡದ ಬಳಕೆ ಹೆಚ್ಚಿದಂತೆ ಕನ್ನಡಕ್ಕೆ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳುತ್ತವೆ.
6. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಿದರೆ ಕನ್ನಡ ಭಾಷೆ ಮುಂದಿನ ಪೀಳಿಗೆಗೂ ಸದೃಢವಾಗಿ ನಿಲ್ಲುತ್ತದೆ.

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚಿನ

ಮೀಸಲಾತಿಯನ್ನು ಕಲ್ಪಿಸಿಕೊಡಬೇಕು. ಕನ್ನಡ ಭಾಷೆ, ಸಾಹಿತ್ಯ, ಅಧ್ಯಯನ, ಸಂಶೋಧನೆಗಳಿಗಾಗಿ ಸ್ಥಾಪನೆಗೊಂಡಿರುವ ವಿಶ್ವವಿದ್ಯಾಲಯಗಳಿಗೆ, ಕನ್ನಡ ಪ್ರಾಧಿಕಾರಗಳಿಗೆ, ಸಂಘಸಂಸ್ಥೆಗಳಿಗೆ ಹೆಚ್ಚಿನ ಅನುದಾನಗಳನ್ನು ನೀಡಬೇಕು. ಹಾಗೆಯೇ, ಅವುಗಳೂ ಸಹ, ಪ್ರಾಮಾಣಿಕವಾದ ಗುರಿ, ಉದ್ದೇಶಗಳನ್ನು ಇಟ್ಟುಕೊಂಡು ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ. ಕರ್ನಾಟಕದಲ್ಲಿ ಭೌಗೋಳಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಏನೇ ಭಿನ್ನಾಭಿಪ್ರಾಯಗಳಿದ್ದರೂ ಕನ್ನಡ ಭಾಷೆ, ನಾಡುನುಡಿ, ಗಡಿ, ಜಲ ವಿಚಾರಕ್ಕೆ ಬಂದಾಗ ಎಲ್ಲರೂ ಒಕ್ಕೊರಲಿನಿಂದ ಏಕತೆಯ ಸಂದೇಶವನ್ನು ಸಾರಬೇಕಾಗಿದೆ. ಇತರ ಭಾಷೆಗಳನ್ನು ಗೌರವಿಸೋಣ, ನಮ್ಮ ಭಾಷೆಯನ್ನು ಪ್ರೀತಿಸೋಣ ಎಂದು ಹೇಳುತ್ತಾ, ನಾವೆಲ್ಲಾ ಕನ್ನಡವನ್ನು ಉಳಿಸೋಣ, ಬೆಳೆಸೋಣ ಎಂಬ ಪೊಳ್ಳು ಘೋಷಣೆಗಳನ್ನು ಬಿಟ್ಟು, ಕನ್ನಡ ಭಾಷೆಯ ಅಳಿವು ಉಳಿವು ನಮ್ಮ ಕೈಯಲ್ಲಿಯೇ ಇದೆ ಹೊರತು ಯಾವ ಸರ್ಕಾರದ ಕೈಯಲ್ಲಿ ಇಲ್ಲ ಎಂಬುದನ್ನು ಕನ್ನಡಿಗರು ಮನಗಾಣಬೇಕು. ಕನ್ನಡ ಭಾಷೆಯ ಉದ್ದಾರ ಆಗಬೇಕಾದರೆ ಕನ್ನಡಿಗರು ದಿನನಿತ್ಯ ಎಲ್ಲಾ ಹಂತದಲ್ಲಿ ಕನ್ನಡ ಬಳಸಬೇಕು, ಕನ್ನಡವನ್ನು ಮೆರೆಸಬೇಕು. ನಾವೆಲ್ಲಾ ಕನ್ನಡವನ್ನು ದಿನನಿತ್ಯದ ಬದುಕಲ್ಲಿ ಬಳಸಿದಾಗ ಶಾಶ್ವತವಾಗಿ ಉಳಿಯುತ್ತದೆ. ಇನ್ನಷ್ಟು ವಿಸ್ತರಿಸುತ್ತದೆ ಅಲ್ಲವೆ?

**ಪರಾಮರ್ಶ ಗ್ರಂಥಗಳು:**

1. ತಿಪ್ಪೇರುದ್ರಸ್ವಾಮಿ ಎಚ್., (2016), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು04
2. ಕೃಷ್ಣಯ್ಯ ಎಂ.ಎಚ್., (1999) ಸಂಕ್ಷಿಪ್ತ ಕನ್ನಡ ಭಾಷೆ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.